**Anti Land-Grabbing Action Committee**
**ಭೂಕಬಳಿಕೆ ವಿರೋಧಿ ಹೋರಾಟ ಸಮಿತಿ**
No. 759, 5th Main, 8th Cross, R.T.Nagar, II Block, Bangalore 560032 Ph: 094481 20305
Website : http://savekarnataka.in email: karnatakasave@gmail.com

---

**ಪತ್ರಿಕಾ ಪ್ರಕಟಣೆ** **ದಿನಾಂಕ: 09.01.2016**

1. **ಭೂಕಬಳಿಕೆ ನಿಷೇದ ಕಾಯ್ದೆಯ ಪ್ರಕಾರ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದು ವಿಳಂಬವಾಗುತ್ತಿರುವ ಬಗ್ಗೆ :**

ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆ ಅಕ್ಟೋಬರ್ 2014ಕ್ಕೆ ಜಾರಿಗೆ ಬಂದು 15 ತಿಂಗಳುಗಳು ಕಳೆದಿದ್ದರೂ , ಕಾಯ್ದೆಯ ಪ್ರಕಾರ ಭೂಕಬಳಿಕೆ / ಒತ್ತುವರಿ ಪ್ರಕರಣಗಳನ್ನು ಇತ್ಯರ್ಥಗೊಳಿಸಲು ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವುದರಲ್ಲಿ ಸರ್ಕಾರ ವಿಳಂಬ ಮಾಡುತ್ತಿದೆ. ನಮ್ಮ ಸಮಿತಿಯು ಹಲವಾರು ಬಾರಿ ಸಂಬಂಧಪಟ್ಟ ಮಂತ್ರಿಗಳಿಗೆ ಹಾಗೂ ನೇರವಾಗಿ ಮುಖ್ಯ ಮಂತ್ರಿಗಳಿಗೂ ಪತ್ರ ಬರೆದು ಕೂಡಲೇ ವಿಶೇಷ ನ್ಯಾಯಾಲಯಗಳನ್ನು ಸ್ಥಾಪಿಸುವಂತೆ ಮನವಿ ಮಾಡುತ್ತಲೇ ಬಂದಿದೆ. ಸನ್ಮಾನ್ಯ ಕಾನೂನು ಸಚಿವರ ಕಚೇರಿ ಎದುರು ಧರಣಿ ನಡೆಸಿದನಂತರ ದಿನಾಂಕ 8/10/2015 ಕ್ಕೆ, ವಿಶೇಷ ನ್ಯಾಯಾಲಯಗಳ ಸ್ಥಾಪನೆ ಕುರಿತು ಅಧಿಕೃತ ಪ್ರಕಟಣೆ ಹೊರಡಿಸಲಾಯಿತು. ಅದಾಗಿ ಮೂರು ತಿಂಗಳುಗಳು ಕಳೆದಿದ್ದರೂ ಇನ್ನೂ ನ್ಯಾಯಾಲಯಗಳನ್ನು ಸ್ಥಾಪಿಸಲು ಬೇಕಾದ ಪ್ರಕ್ರಿಯೆಗಳು ವಿಳಂಬವಾಗುತ್ತಿದೆ. ಕ್ರಮ ತೆಗೆದುಕೊಳ್ಳಬೇಕಾದ ಕಂದಾಯ ಇಲಾಖೆ ಒಂದಲ್ಲಾ ಒಂದು ನೆಪ ಹೇಳಿ ಮುಂದಕ್ಕೆ ಹಾಕುತ್ತಾ ಭೂಗಳ್ಳರ ರಕ್ಷಣೆಗೆ ನಿಂತಿದೆ. ಸರ್ಕಾರದ ಧೋರಣೆ ಇದೇ ರೀತಿ ಮುಂದುವರೆದಲ್ಲಿ ನಾವು ನಮ್ಮ ಹೋರಾಟವನ್ನು ತೀವ್ರಗೊಳಿಸಬೇಕಾಗುತ್ತದೆ. ಇದಕ್ಕೆ ಅವಕಾಶ ಮಾಡಿಕೊಡದೆ ಸರ್ಕಾರ ವಿಶೇಷ ನ್ಯಾಯಾಲಯಗಳನ್ನು ಕಾರ್ಯಾಚರಣೆಗೆ ತರಲು ಬೇಕಾದ ಎಲ್ಲಾ ಅಗತ್ಯ ಕ್ರಮಗಳನ್ನು ಕೂಡಲೇ ಮಾಡಬೇಕೆಂದು ಮತ್ತೊಮ್ಮೆ ಒತ್ತಾಯಿಸುತ್ತೇವೆ.

ಕೆರೆ ಒತ್ತುವರಿ ಅಧ್ಯಯನ ಮಾಡುತ್ತಿರುವ ಜಂಟಿ ಸದನ ಸಮಿತಿಯು ಬೆಂಗಳೂರಿನಲ್ಲಿ 11000 ಎಕರೆ ಕೆರೆಯಂಗಳ ಒತ್ತುವರಿಯಾಗಿದೆ ಎಂದು ಪತ್ರಿಕಾ ಹೇಳಿಕೆ ನೀಡಿದೆ. ಸರ್ಕಾರಿ ಸಂಸ್ಥೆಯಾದ ಬಿಡಿಎ 3500 ಎಕರೆ ಒತ್ತುವರಿ ಮಾಡಿದ್ದು ಅದರಲ್ಲಿ 65000 ನಿವೇಶನಗಳನ್ನು ಹಂಚಿದೆ ಎಂದೂ ತಿಳಿಸಿದ್ದಾರೆ. ತಡವಾಗಿಯಾದರೂ ಬೆಂಗಳೂರಿನ ಕೆರೆಗಳ ಸರ್ವೇ ಕಾರ್ಯ ನಡೆದು ಕೆರೆ ಒತ್ತುವರಿ ಸಮಸ್ಯೆಯ ಬಗ್ಗೆ ಅಧ್ಯಯನ ನಡೆದು , ಅದನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆದಿರುವುದು ಸ್ವಾಗತಾರ್ಹ. ಆದರೆ ಜಂಟಿ ಸದನ ಸಮಿತಿಯ ಅಧ್ಯಕ್ಷರಾದ ಶ್ರೀ ಕೆ. ಬಿ. ಕೋಳಿವಾಡ ರವರು ಈ ಹಿಂದೆ ಬೇರೆ ಸಮಿತಿಗಳು ಭೂಕಬಳಿಕೆ / ಒತ್ತುವರಿ ವಿಷಯದಲ್ಲಿ ನೀಡಿರುವ ವರದಿಗಳ ಬಗ್ಗೆ ಗೊಂದಲ ಉಂಟುಮಾಡುವ ಹೇಳಿಕೆಗಳನ್ನು ಕೊಡುತ್ತಿರುವುದು ಆತಂಕಕಾರಿಯಾಗಿದೆ. ವರದಿಗಳು ನ್ಯಾಯಸಮ್ಮತವಾಗಿಲ್ಲ, ಸರ್ಕಾರದ ಮಾನ್ಯತೆ ಪಡೆದಿಲ್ಲ, ಧೂಳು ಹಿಡಿಯುತ್ತಿವೆ ಎಂದೆಲ್ಲಾ ಹೇಳಿ ವಿಷಯಾಂತರ ಮಾಡುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. 2007ರಲ್ಲೇ ಎ. ಟಿ. ರಾಮಸ್ವಾಮಿ

ನೇತೃತ್ವದ ಜಂಟಿ ಸದನ ಸಮಿತಿ ನೀಡಿದ ಎರಡೂ ಮಧ್ಯಂತರ ವರದಿಗಳು ಎರಡೂ ಸದನಗಳಲ್ಲಿ ಅಂಗೀಕೃತವಾಗಿ , ಇತ್ತೀಚೆಗಷ್ಟೆ ಆ ಸಮಿತಿಯ ಶಿಫಾರಸ್ಸಿನಂತೆ ಕರ್ನಾಟಕ ಭೂಕಬಳಿಕೆ ನಿಷೇಧ ಕಾಯ್ದೆ ಜಾರಿಗೆ ಬಂದಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ಇದಲ್ಲದೆ, ಸರ್ಕಾರವೇ ' ಎ. ಟಿ. ರಾಮಸ್ವಾಮಿ ವರದಿಯ ಪ್ರಕಾರ 'ಎಂದು ಉಲ್ಲೇಖಿಸಿ ಸಾವಿರಾರು ಒತ್ತುವರಿದಾರರಿಗೆ ನೋಟಿಸ್ ಜಾರಿ ಮಾಡಿದೆ. ನ್ಯಾಯಾಲಯಗಳು ಅನೇಕ ಬಾರಿ ಲಕ್ಷ್ಮಣ್ ರಾವ್ ವರದಿ ಮತ್ತು ರಾಮಸ್ವಾಮಿ ವರದಿಗಳನ್ನು ಆದೇಶಗಳಲ್ಲಿ ಉಲ್ಲೇಖಿಸಿವೆ. ಇನ್ನು ಬಾಲಸುಬ್ರಮಣಿಯನ್ ವರದಿ ಪ್ರಕಾರ ಉಚ್ಚ ನ್ಯಾಯಾಲಯವೇ ಒತ್ತುವರಿ ತೆರವುಗೊಳಿಸುವಂತೆ ಆದೇಶ ಮಾಡಿದೆ. ವಾಸ್ತವ ಹೀಗಿರುವಾಗ, ಈ ಎಲ್ಲಾ ವರದಿಗಳು ಧೂಳು ಹಿಡಿಯುತ್ತಿವೆ ಎಂಬುದು ಎಷ್ಟು ಸರಿ? ಆದ್ದರಿಂದ ಶ್ರೀ ಕೆ. ಬಿ. ಕೋಳಿವಾಡ ರವರು ಈ ರೀತಿ ಗೊಂದಲಮಯ ಹೇಳಿಕೆಗಳನ್ನು ನೀಡುವುದರ ಬದಲು ಮೂಲ ಸಮಸ್ಯೆ ಬಗೆಹರಿಸುವಲ್ಲಿ ತೊಡಗಬೇಕೆಂಬುದು ನಮ್ಮ ಕಳಕಳಿಯ ಮನವಿ.

ನಕಲಿ ದಾಖಲೆಗಳನ್ನು ಸೃಷ್ಟಿಸಿ ಕಬಳಿಕೆ/ ಒತ್ತುವರಿ ಆಗಿರುವ ಕೆರೆಯಂಗಳಗಳನ್ನು ಯಾವ ರೀತಿ ತೆರವುಗೊಳಿಸಬೇಕೆಂದು ಈಗಾಗಲೇ ನಮ್ಮ ಹೋರಾಟ ಸಮಿತಿ 8.5.2015ಕ್ಕೆ ಮುಖ್ಯ ಮಂತ್ರಿಗಳಿಗೆ ಕೊಟ್ಟಿರುವ ಪತ್ರದಲ್ಲಿ ತಿಳಿಸಿರುತ್ತದೆ. ನಾವು ತಿಳಿಸಿರುವ ಕ್ರಿಯಾ ಯೋಜನೆಯು ಈ ರೀತಿಯಿದೆ: ಮೂಲ ಭೂಗಳ್ಳರನ್ನು ಗುರುತಿಸುವುದು - ನಕಲಿ ದಾಖಲೆ ಸೃಸ್ಟಿಸಲು ಸಹಕರಿಸಿದ ಅಧಿಕಾರಿಗಳು / ನೌಕರಾರರನ್ನು ಗುರುತಿಸುವುದು - ಆ ಭೂಗಳ್ಳರ ಮತ್ತು ಅಧಿಕಾರಿಗಳ ವಿರುದ್ಧ ಕ್ರಿಮಿನಲ್ ಮೊಕದ್ದಮೆ ದಾಖಲಿಸುವುದು - ಅವರುಗಳ ಆಸ್ತಿ ಮುಟ್ಟುಗೋಲು ಹಾಕಿಕೊಳ್ಳುವುದು - ಸರ್ಕಾರದ ಇಲಾಖೆಗಳೇ ದೃಡೀಕರಿಸಿರುವ ದಾಖಲೆಗಳನ್ನು ನಂಬಿ ಭೂಗಳ್ಳರಿಂದ ನಿವೇಶನ / ಮನೆಗಳನ್ನು ಖರೀದಿಸಿರುವ ಅಮಾಯಕರಿಗೆ ಪರಿಹಾರ ಕೊಡುವುದು - ನಂತರ ತೆರವು ಕಾರ್ಯಾಚರಣೆ ಮಾಡುವುದು.

ಪ್ರಭಾವಿ ಭೂಗಳ್ಳರು ನಕಲಿ ದಾಖಲೆ ಸೃಷ್ಟಿಸಿ ಕೆರೆ ಕಬಳಿಕೆ ಮಾಡಿ ಅದನ್ನು ಅಮಾಯಕರಿಗೆ ಮಾರಿರುವ ಪ್ರಕರಣಗಳು ವಿಶೇಷ ನ್ಯಾಯಾಲಯಗಳಲ್ಲಿ ತೀರ್ಮಾನವಾಗಬೇಕಾಗುತ್ತದೆ. ದಶಕಗಳಿಂದ ಎಗ್ಗಿಲ್ಲದೆ ನಡೆದಿರುವ ಕೆರೆಗಳ ಕಬಳಿಕೆ / ಒತ್ತುವರಿ ಸಮಸ್ಯೆಯನ್ನು ಪರಿಹರಿಸುವ , ಕೆರೆಗಳನ್ನು ಪುನಸ್ಚೇತನಗೊಳಿಸಿ ಬೆಂಗಳೂರನ್ನು ಸುಂದರಗೊಳಿಸಲು ಬೇಕಾದ ಶಿಫಾರಸ್ಸನ್ನು ಮಾಡುವ ಸದವಕಾಶ ದೊರೆತಿರುವಾಗ, ಅದನ್ನು ಉಪಯೋಗಿಸಿಕೊಂಡು , ಶ್ರೀ ಕೆ. ಬಿ ಕೋಳಿವಾಡ ರವರು ಪರಿಣಾಮಕಾರಿಯಾದ ವರದಿ ನೀಡಬೇಕೆಂಬುದೇ ನಮ್ಮ ಆಶಯ.

2. **ಭೂ ಅಕ್ರಮಗಳ ಬಗ್ಗೆ ಉಚ್ಚನ್ಯಾಯಾಯಲಕ್ಕೆ ದಾಖಲೆ ಕೊಟ್ಟಿದ್ದರೂ ಕ್ರಮ ಆಗದಿರುವ ಬಗ್ಗೆ:**

ಈ ವಿಷಯವಾಗಿ ನಮ್ಮ ಸಮಿತಿಯು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿಗಳಿಗೆ ಬರೆದಿರುವ ಪತ್ರವನ್ನು ಮತ್ತು ಅದರ ಕನ್ನಡ ಅನುವಾದವನ್ನು ಈ ಪತ್ರಿಕಾ ಪ್ರಕಟಣೆಗೆ ಲಗತ್ತಿಸಲಾಗಿದೆ.

3. **ಅಕ್ರಮಗಳಿಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ಚುನಾವಣೆಗಳನ್ನು ನಡೆಸುವುದರ ಬಗ್ಗೆ:**

ನಮ್ಮ ಪ್ರಜಾಪ್ರಭುತ್ವದ ಜೀವಾಳವೇ ಚುನಾವಣೆಗಳ ಮೇಲೆ ನಿಂತಿರುತ್ತದೆ. ಚುನಾವಣೆಗಳು ನಿಷ್ಪಕ್ಷಪಾತವಾಗಿ ಯಾವುದೇ ಅಕ್ರಮಗಳಿಗೆ ಅವಕಾಶವಿಲ್ಲದಂತೆ ನಡೆಯಬೇಕು. ಆದರೆ ಇತ್ತೀಚಿನ ದಿನಗಳಲ್ಲಿ ಚುನಾವಣೆಗಳು ನಿಷ್ಪಕ್ಷಪಾತವಾಗಿ ನಡೆಯದೆ ಅಕ್ರಮಗಳು ಹೆಚ್ಚಾಗುತ್ತಿವೆ. ಚುನಾವಣೆಗಳನ್ನು ನ್ಯಾಯೋಚಿತವಾಗಿ ನಡೆಸಬೇಕಾದ ಚುನಾವಣಾ ಆಯೋಗವು ಒಂದು ಸ್ವಾಯತ್ತ ಸಂಸ್ಥೆಯಾಗಿದ್ದರೂ ಸಹ ಸರ್ಕಾರದ ಕೈಗೊಂಬೆಯಂತೆ ಕಾರ್ಯ ನಿರ್ವಹಿಸುತ್ತಿರುವುದು ದುರದೃಷ್ಟಕರ. ಉದಾಹರಣೆಗೆ, ಇತ್ತೀಚೆಗೆ ನಡೆದ ಮೇಲ್ಮನೆ ಚುನಾವಣೆಗಳು ಹಣಬಲ ಮತ್ತು ತೋಳ್ಬಲ ಇದ್ದವರ ಪರವಾಗಿ ಆಗಿರುವುದು ಎಲ್ಲರಿಗೂ ತಿಳಿದಿರುವ ವಿಷಯ. ರಾಜಾರೋಷವಾಗಿ ಅಕ್ರಮಗಳು ನಡೆಯುತ್ತಿದ್ದರೂ ಚುನಾವಣಾ ಆಯೋಗ ಕ್ರಮ ಕೈಗೊಂಡಿರುವ ಉದಾಹರಣೆಗಳೇ ಇಲ್ಲ. ಅತ್ಯಂತ ಆಧುನಿಕ ತಂತ್ರಜ್ಞಾನ ಲಭ್ಯವಿದ್ದರೂ  ಅಕ್ರಮಗಳನ್ನು ಪತ್ತೆ ಹಚ್ಚಿ ತಡೆಯುವುದರಲ್ಲಿ ಚುನಾವಣಾ ಆಯೋಗದಿಂದ ಒಂದು ಸಣ್ಣ ಪ್ರಯತ್ನವೂ ಆಗುತ್ತಿಲ್ಲ. ಅಕ್ರಮ ಮಾಡುವವರಿಗೆ ಯಾವುದೇ ಶಿಕ್ಷೆಯಾಗುತ್ತಿಲ್ಲ. ಇದೇ ರೀತಿ ಅಕ್ರಮಗಳು ಮುಂದುವರೆದರೆ ಚುನಾವಣೆಗಳು 'Democracy for Sale '  ಆಗುವುದರಲ್ಲಿ ಸಂಶಯವಿಲ್ಲ.

ಮುಂಬರುವ ಪಂಚಾಯತಿ ಚುನಾವಣೆಗಳು ಅಕ್ರಮಗಳಿಗೆ ಅವಕಾಶವಿಲ್ಲದಂತೆ ಪಾರದರ್ಶಕವಾಗಿ ನಡೆಯಬೇಕೆಂಬುದು ನಮ್ಮ ಆಶಯ. ಆದ್ದರಿಂದ ಚುನಾವಣೆಗಳನ್ನು ಸರಿಯಾದ ರೀತಿಯಲ್ಲಿ ನಡೆಸುವ ಮಹತ್ತರವಾದ ಜವಾಬ್ದಾರಿ ಹೊತ್ತಿರುವ ಚುನಾವಣಾ ಆಯೋಗವು ಈಗಲಾದರೂ ಸಶಕ್ತವಾಗಿ ಕಾರ್ಯ ನಿರ್ವಹಿಸಿ ಅಕ್ರಮಗಳಿಗೆ ಅವಕಾಶವಿಲ್ಲದ ರೀತಿಯಲ್ಲಿ ಅತ್ಯಂತ ಪಾರದರ್ಶಕವಾಗಿ ಚುನಾವಣೆಗಳನ್ನು ನಡೆಸಿ  ಪ್ರಜಾಪ್ರಭುತ್ವವನ್ನು ಕಾಪಾಡಬೇಕೆಂದು ಆಶಿಸುತ್ತೇವೆ .

ತಮ್ಮ ವಿಸ್ವಾಸಿ

(ಎ. ಟಿ. ರಾಮಸ್ವಾಮಿ)
ಸಂಚಾಲಕರು